# 6206 – C01 – IIISC – N – 19

THIRD SEMESTER B.Com. DEGREE EXAMINATION, NOVEMBER 2019

**(Revised)**

## CORPORATE ACCOUNTING - I

*Time* : 3 *Hours*] [*Max. Marks* : 80

*Attempt* **all** *the Sections as per internal choice.*
*Simple calculators are allowed to be used.*
*Question No.* **13** *is* **Compulsory.**

**Section A** – (Marks : 10 × 2 = 20)

1. Answer any **ten** questions of the following:
   a) What is book-building method of issue of shares?
   b) What are bonus shares?
   c) Who are Underwriters?
   d) What is redemption of shares?
   e) What is purchase of debentures at cum-interest?
   f) What is interim dividend?
   g) What is managerial remuneration?
   h) What is the nature of profit prior to incorporation?
   i) Write four expenses chargeable after incorporation period.
   j) What is reduction of share capital?
   k) What is internal reconstruction?
   l) What are rights shares?

**Section B** – (Marks: 3 × 5 = 15)

*Answer any* **three** *questions from the following.*

2. Vijaya Co. Ltd. declared a bonus of Rs. 1,00,000 out of its general reserve. This bonus is to be utilized as follows:
   a) To issue 4,000 equity shares of Rs. 10 each as fully paid bonus shares.
   b) To utilize the final call of Rs. 2 per share on 20,000 equity shares of Rs.10 each which are partly paid-up.
   c) To pay Rs. 20,000 in cash.

   Pass the necessary journal entries.

[P.T.O.

Scanned by CamScanner

3. Malatesh Co. Ltd. issued 30,000 shares of Rs. 10 each, of which the shares were underwritten as follows:

   Mr. Amogh - 15,000 shares and Mr. Akshay - 9,000 shares.

   The public subscribed for 24,000 shares which included marked applications as follows:

   Mr. Amogh - 3,600 shares and Mr. Akshay - 900 shares.

   Determine the liability of each underwriter.

4. Sai Co. Ltd. purchases for immediate cancellation 2,000 12% of its debentures of Rs. 100 each on 1-12-2018, the due date of interest being 31st March and 30th September.

   Pass the journal entries relating to the cancellation, if

   a) Debentures are purchased at Rs. 92 ex-interest.

   b) Debentures are purchased at Rs. 92 cum-interest.

5. From the following information furnished by Anusha Trading Company, prepare Statement of Profit or Loss for the year ending 31-3-2019:

| | | Rs. |
|---|---|---|
| a) | Revenue from operations | 5,00,000 |
| b) | Other income | 10,000 |
| c) | Total expenses | 3,00,000 |
| d) | Exceptional items | 5,000 |
| e) | Extra-ordinary items (Profit) | 4,000 |
| f) | Tax expenses | 19,000 |
| g) | Profit from discontinuing operations | 8,000 |
| h) | Tax expenses on discontinuing operations | 3,000 |

6. Arpita Co. Ltd. was formed on 1-4-2018 to take over the business of Aditi Traders with effect from 1-1-2018. The following are the figures for the year ending 31-12-2018:

| Particulars | Rs. |
|---|---|
| Gross Profit | 70,000 |
| Expenses: | |
| Salaries and allowances | 29,500 |
| Advertisement | 7,000 |
| Audit Fees | 7,100 |
| Directors Fees | 7,400 |
| | 51,000 |
| Net Profit for the year (70,000 – 51,000) | 19,000 |

The sales upto 1-4-2018 was Rs. 2,00,000 and for the subsequent period it was Rs.3,00,000. Prepare the statement showing profit prior to and after incorporation.

Scanned by CamScanner

7. Shankar Co. Ltd. decided to go in for internal reconstruction which was approved by the court. The scheme of reconstruction is as follows:

a) 1,00,000 equity shares of Rs. 10 each fully paid be reduced by Rs. 7 per share.

b) 2,00,000 preference shares of Rs. 10 each fully paid be reduced by Rs. 2 per share.

c) The reduction amount of Share Capital is utilized to write off accumulated loss balance Rs. 2,60,000; Preliminary expenses Rs. 1,50,000; Patents Rs. 1,75,000; Goodwill Rs.2,00,000; Discount on issue of shares Rs. 1,35,000.

Pass Journal Entries to give effect to the above scheme.

**Section C** – (Marks: 3 × 15 = 45)
*Question No.* **13** *is* **Compulsory.**
*Answer any* **two** *of the remaining.*

8. Suresh Co. Ltd. issued 25,000 equity shares of Rs. 100 each at a discount of Rs. 10 per share. The amount payable was as follows:

Rs. 20 on Application; Rs. 30 on Allotment and Rs. 40 on First and Final Call.

All the shares were subscribed and the amounts were duly received.

Pass the journal entries. Prepare ledger accounts and Balance Sheet.

9. Manjula Ltd. issued 1,80,000 shares of Rs. 10 each. The whole of the issue was underwritten as follows:

Akash - 90,000 shares (firm underwriting 18,000 shares)

Balu - 54,000 shares (firm underwriting 9,000 shares)

Chetan - 36,000 shares (firm underwriting 9,000 shares)

Total applications received were 1,62,000 and the following are the marked applications including firm underwriting:

Akash - 63,000 shares

Balu - 25,200 shares

Chetan - 28,800 shares

Calculate the liability of each underwriter that the benefit of firm underwriting is given to the underwriters.



Scanned by CamScanner

10. Abhishek Co. Ltd. issued 20,000 10% Debentures of Rs. 100 each. The amount was payable as follows:

Rs. 10 on Application

Rs. 20 on Allotment

Rs. 15 on First Call

Rs. 25 on Second Call

Rs. 30 on Third and Final Call.

All the Debentures were subscribed and the amount was duly received.

Pass the journal entries and prepare the ledger accounts.

11. Prepare the Balance Sheet of Suresh Co. Ltd. as at 31-3-2019 along with relevant Notes on Accounts in the prescribed form from the following:

| Particulars (Name of Accounts) | Dr. (Rs.) | Cr. (Rs.) |
|---|---|---|
| 1. Share Capital: | | |
| 13,000 equity shares of Rs. 10 each | -- | 1,30,000 |
| 2. Securities premium | -- | 50,000 |
| 3. General Reserve | -- | 1,12,500 |
| 4. Loss for the current year | 30,000 | -- |
| 5. Bonds and Debentures | -- | 1,00,000 |
| 6. Other long-term loans | -- | 20,000 |
| 7. Short-term borrowings | -- | 30,000 |
| 8. Trade Payables (Short-term) | -- | 1,04,500 |
| 9. Other Current Liabilities | -- | 17,000 |
| 10. Provision for income-tax | -- | 70,000 |
| 11. Building (after depreciation of Rs. 36,000) | 2,45,000 | -- |
| 12. Capital work-in-progress (Cost of Construction) | 10,000 | |
| 13. Investments (Non-Current) | 42,520 | |
| 14. Closing Stock | 1,20,000 | |
| 15. Loose Tools | 5,800 | |
| 16. Trade Receivables (Short-term) | 1,20,480 | |
| 17. Cash-at-Bank | 60,200 | |
| Total | 6,34,000 | 6,34,000 |

Additional Information:

a) Authorized Capital consists of 24,000 equity shares of Rs. 10 each.

b) Other Current Liabilities consist of 'Income received in advance'.

Scanned by CamScanner

12. Shankar Ltd. was incorporated on 1-7-2018 taking over the business of Shiva as from 1-4-2018. The following was his information for the year ended 31-3-2019:

| Particulars | Rs. |
|---|---|
| Gross Profit | 2,80,000 |
| Expenses: | |
| Salaries and allowances | 1,44,000 |
| Office expenses | 48,000 |
| Printing & Stationery | 8,000 |
| Rent & Rates | 7,200 |
| Commission on Sales | 32,000 |
| Audit Fees | 4,000 |
| Free Samples | 8,000 |
| Interest on debentures | 12,000 |
| Depreciation | 16,000 |
| Bad debts | 3,200 |
| Directors fees | 4,000 |
| Formation expenses | 4,000 |
| Sundry expenses | 1,600 |
| | 2,92,000 |
| Net Loss (2,92,000 – 2,80,000) | 12,000 |

Additional Information:

a) Sales upto 1-7-2018 amounted to Rs. 3,20,000 and thereafter Rs. 4,80,000.

b) Rent was paid at Rs. 400 per month.

c) Bad debts upto 30-6-2018 was Rs. 800.

Prepare Statement of Profit and Loss showing profit or loss prior to and after incorporation.

[P.T.O.

Scanned by CamScanner

13. Case Study **(Compulsory)**

Following is the Balance Sheet (Statement of Assets and Liabilities) as on 31-3-2019 of G & Co. Ltd.:

| Particulars | Note | Rs. |
|---|---|---|
| I Equity and Liabilities: | | |
| 1. Shareholders' Funds: | | |
| a) Share Capital | 1 | 20,00,000 |
| b) Reserves and Surplus | 2 | (-) 3,00,000 |
| 2. Current Liabilities: | | |
| a) Trade Payables | 3 | 15,50,000 |
| Total | | 32,50,000 |
| II. Assets: | | |
| 1. Non-Current Assets: | | |
| a) Tangible Fixed Assets | 4 | 20,00,000 |
| b) Intangible Fixed Assets | 5 | 4,50,000 |
| 2. Current Assets: | | |
| a) Inventories | 6 | 7,80,000 |
| b) Cash and Cash equivalents | 7 | 20,000 |
| Total | | 32,50,000 |

Notes:

| | |
|---|---|
| 1. Share Capital: | |
| 2,00,000 equity shares of Rs. 10 each | 20,00,000 |
| 2. Reserves and Surplus: | |
| Profit & Loss Account (Dr.) | (-) 2,00,000 |
| Preliminary Expenses | (-) 1,00,000 |
| Total | (-) 3,00,000 |
| 3. Trade Payables: | |
| Sundry Creditors | 14,50,000 |
| Bills Payable | 1,00,000 |
| Total | 15,50,000 |
| 4. Tangible Fixed Assets: Machinery | 20,00,000 |

Scanned by CamScanner

| | | |
|---|---|---|
| 5. | Intangible Fixed Assets: | |
| | Goodwill | 4,00,000 |
| | Patents | 50,000 |
| | Total | 4,50,000 |
| 6. | Inventories: Stock | 7,80,000 |
| 7. | Cash and Cash Equivalents: Cash-in-hand | 20,000 |

Draft a suitable scheme of reconstruction for reduction of share capital which would help the company to reorganize on the following basis:

a) To write off completely Goodwill, loss balance, preliminary expenses and patents.

b) To depreciate machinery by 10%.

c) To reduce the value of stock to Rs. 7,30,000.

Also give the journal entries required to implement the above scheme and redraft the Balance Sheet.



Scanned by CamScanner

## KANNADA VERSION

*ಆಂತರಿಕ ಆಯ್ಕೆ ಪ್ರಕಾರ ಎಲ್ಲಾ ವಿಭಾಗಗಳಿಗೆ ಉತ್ತರಿಸಿರಿ.*
*ಸರಳ ಕ್ಯಾಲ್ಕುಲೇಟರ್‌ಗಳನ್ನು ಉಪಯೋಗಿಸಬಹುದು.*
**ಪ್ರಶ್ನೆ 13 ಕಡ್ಡಾಯವಾಗಿದೆ.**

**ವಿಭಾಗ ಅ** (ಅಂಕಗಳು : 10 × 2 = 20)

1. ಈ ಕೆಳಗಿನ ಬೇಕಾದ **ಹತ್ತಕ್ಕೆ** ಉತ್ತರಿಸಿರಿ :

   a) ಶೇರು ನೀಡಿಕೆಯ ಬುಕ್ ಬಿಲ್ಡಿಂಗ್ ಪದ್ಧತಿ ಎಂದರೇನು ?

   b) ಬೋನಸ್ ಶೇರುಗಳು ಎಂದರೇನು ?

   c) ಒಟ್ಟು ಕೊಳ್ಳುವ ಭರವಸೆದಾರರು ಎಂದರೆ ಯಾರು ?

   d) ಶೇರುಗಳ ಮರುಪಾವತಿ ಎಂದರೇನು ?

   e) ಬಡ್ಡಿ ಸಹಿತ ಸಾಲ ಪತ್ರಗಳ ಖರೀದಿ ಎಂದರೇನು ?

   f) ಮಧ್ಯಂತರ ಲಾಭಾಂಶ ಎಂದರೇನು ?

   g) ನಿರ್ವಾಹಕರ ಸಂಭವನೆ ಎಂದರೇನು ?

   h) ನೋಂದಣಿಪೂರ್ವ ಲಾಭದ ಸ್ವರೂಪವೇನು ?

   i) ನೋಂದಣಿ ನಂತರ ಅವಧಿಗೆ ಸಂಬಂಧಿಸಿದ ಯಾವುದೇ ನಾಲ್ಕು ವೆಚ್ಚಗಳನ್ನು ಬರೆಯಿರಿ.

   j) ಶೇರು ಬಂಡವಾಳದ ಕಡಿತ ಎಂದರೇನು ?

   k) ಆಂತರಿಕ ಪುನರ್-ರಚನೆ ಎಂದರೇನು ?

   l) ಹಕ್ಕಿನ ಶೇರುಗಳು ಎಂದರೇನು ?

**ವಿಭಾಗ ಬ** (ಅಂಕಗಳು : 3 × 5 = 15)

*ಈ ಕೆಳಗಿನವುಗಳಲ್ಲಿ ಬೇಕಾದ **ಮೂರಕ್ಕೆ** ಉತ್ತರಿಸಿರಿ.*

2. ವಿಜಯ ಕಂಪನಿ ನಿಯಮಿತವು ತನ್ನ ಸಾಮಾನ್ಯ ಮೀಸಲು ನಿಧಿಯಿಂದ ರೂ. 1,00,000 ಮೊತ್ತದ ಬೋನಸ್‌ನ್ನು ಘೋಷಿಸಿದೆ. ಈ ಬೋನಸ್‌ನ್ನು ಕೆಳಗಿನಂತೆ ಉಪಯೋಗಿಸಲಾಗಿದೆ.

   a) 4,000 ಸಾಮಾನ್ಯ ಶೇರುಗಳು ರೂ. 10 ರಂತೆ ಪೂರ್ಣ ಸಂದಾಯವಾದ ಬೋನಸ್ ಶೇರುಗಳನ್ನು ನೀಡಲು.

   b) 20,000 ಸಾಮಾನ್ಯ ಶೇರುಗಳ ರೂ. 10 ಮುಖಬೆಲೆಯು ಅಂತಿಮ ಕರೆ ಹಣ ರೂ. 2 ರಂತೆ ಪ್ರತಿ ಶೇರಿಗೆ ವಿನಿಯೋಗಿಸುವುದು.

   c) ರೂ. 20,000 ನಗದು ಬೋನಸ್ ನೀಡಲು ರೋಜು ದಾಖಲೆಗಳನ್ನು ಬರೆಯಿರಿ.

Scanned by CamScanner

3. ಮಾಲತೇಶ ಕಂಪನಿ ನಿಯಮಿತವು 30,000 ಶೇರುಗಳನ್ನು ರೂ. 10 ರಂತೆ ಸಾರ್ವಜನಿಕರಿಗೆ ಬಿಡುಗಡೆ ಮಾಡಿದೆ. ಈ ಕೆಳಗಿನಂತೆ ಒಟ್ಟು ಕೊಳ್ಳುವ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.

ಶ್ರೀ ಅಮೋಘ – 15,000 ಶೇರುಗಳು ಹಾಗೂ

ಶ್ರೀ ಅಕ್ಷಯ – 9,000 ಶೇರುಗಳು

24,000 ಶೇರುಗಳಿಗೆ ಸಾರ್ವಜನಿಕರಿಂದ ವಂತಿಕೆಯನ್ನು ಸ್ವೀಕರಿಸಲಾಗಿದೆ. ಇದರಲ್ಲಿ ಮುದ್ರೆಹೊಂದಿದ ಶೇರಿನ ಅರ್ಜಿಗಳು ಈ ಕೆಳಗಿನಂತೆ ಇವೆ.

ಶ್ರೀ. ಅಮೋಘ – 3,600 ಶೇರುಗಳು ಹಾಗೂ

ಶ್ರೀ. ಅಕ್ಷಯ – 900 ಶೇರುಗಳು

ಒಟ್ಟು ಕೊಳ್ಳುವ ಹೊಣೆಗಾರಿಕೆಯನ್ನು ಕಂಡು ಹಿಡಿಯಿರಿ.

4. ದಿನಾಂಕ 1-12-2018 ನಂದು ಸಾಯಿ ಕಂಪನಿ ನಿಯಮಿತ ಇವರು 2,000 ರೂ. 100 ಮುಖಬೆಲೆಯ 12% ರ ತನ್ನ ಸ್ವಂತದ ಸಾಲ ಪತ್ರಗಳನ್ನು ತಕ್ಷಣ ರದ್ದತಿಗಾಗಿ ಖರೀದಿಸಿದೆ. ಈ ಸಾಲ ಪತ್ರಗಳಿಗೆ ಮಾರ್ಚ್ 31 ರಂದು ಹಾಗೂ ಸೆಪ್ಟಂಬರ್ 30 ರಂದು ಬಡ್ಡಿ ನೀಡಲಾಗುತ್ತದೆ. ಮೇಲ್ಕಾಣಿಸಿದ ಮಾಹಿತಿಗಳೊಂದಿಗೆ ಒಂದು ವೇಳೆ –

a) ಸಾಲ ಪತ್ರಗಳನ್ನು ರೂ. 92 ರಂತೆ ಬಡ್ಡಿರಹಿತ ಬೆಲೆಯಂತೆ ಕೊಂಡರೆ.

b) ಸಾಲ.ಪತ್ರಗಳನ್ನು ರೂ. 92 ರಂತೆ ಬಡ್ಡಿ ಒಳಗೊಂಡ ಬೆಲೆಯಂತೆ ಕೊಂಡರೆ.

ಅವುಗಳ ಬಗ್ಗೆ ರೋಜು ದಾಖಲೆಗಳನ್ನು ಬರೆಯಿರಿ.

5. ಅನುಷ ಟ್ರೇಡಿಂಗ್ ಕಂಪನಿಯು ಈ ಕೆಳಗೆ ಒದಗಿಸಿದ ಮಾಹಿತಿಯಿಂದ, ದಿನಾಂಕ 31-3-2019 ಕ್ಕೆ ಲಾಭ-ಹಾನಿ ಪಟ್ಟಿಯನ್ನು ತಯಾರಿಸಿರಿ.

| | | ರೂ. |
|---|---|---|
| a) | ವ್ಯವಹಾರಗಳ ಆದಾಯ | 5,00,000 |
| b) | ಇತರೆ ಆದಾಯ | 10,000 |
| c) | ಒಟ್ಟು ವೆಚ್ಚಗಳು | 3,00,000 |
| d) | ವಿಶೇಷ ಬಾಬುಗಳು | 5,000 |
| e) | ವಿಶೇಷ ಸಾಮಾನ್ಯ ಬಾಬುಗಳು (ಲಾಭ) | 4,000 |
| f) | ತೆರಿಗೆ ವೆಚ್ಚಗಳು | 19,000 |
| g) | ಸ್ಥಗಿತಗೊಂಡ ವ್ಯವಹಾರಗಳಿಂದ ಬಂದ ಲಾಭ | 8,000 |
| h) | ಸ್ಥಗಿತಗೊಂಡ ವ್ಯವಹಾರಗಳ ಮೇಲಿನ ತೆರಿಗೆ ವೆಚ್ಚ | 3,000 |

[P.T.O.

Scanned by CamScanner

6. ಅರ್ಪಿತಾ ಕಂಪನಿ ನಿಯಮಿತವು ದಿನಾಂಕ 1-4-2018 ನಂದು ಪ್ರಾರಂಭವಾಗಿದ್ದು ಆದಿತಿ ಟ್ರೇಡರ್ಸ್ ಇವರನ್ನು ದಿನಾಂಕ 1-1-2018 ರಿಂದ ಅನ್ವಯವಾಗುವಂತೆ ಖರೀದಿಸಲು ನೋಂದಣಿಯಾಗಿದೆ. ದಿನಾಂಕ 31-12-2018 ಕ್ಕೆ ಈ ಕೆಳಗಿನ ಅಂಕಿ-ಅಂಶಗಳನ್ನು ಒದಗಿಸಿರುತ್ತಾರೆ.

| ವಿವರ | ರೂ. |
|---|---|
| ಒಟ್ಟು ಲಾಭ | 70,000 |
| ವೆಚ್ಚಗಳು : | |
| ವೇತನ ಮತ್ತು ಭತ್ಯಗಳು | 29,500 |
| ಜಾಹೀರಾತು | 7,000 |
| ಲೆಕ್ಕ ಪರಿಶೋಧನಾ ಶುಲ್ಕ | 7,100 |
| ನಿರ್ದೇಶಕರ ಶುಲ್ಕ | 7,400 |
| | 51,000 |
| ನಿವ್ವಳ ಲಾಭ (70,000 – 51,000) | 19,000 |

ದಿನಾಂಕ 1-4-2018 ರ ಒಳಗೆ ಒಟ್ಟು ವಿಕ್ರಯ ರೂ. 2,00,000 ಆಗಿದೆ ಹಾಗೂ ನಂತರದ ವಿಕ್ರಯವು ರೂ. 3,00,000 ಆಗಿರುತ್ತದೆ.

ಕಂಪನಿಯು ಗಳಿಸಿರುವ ನೋಂದಣಿ ಪೂರ್ವದ ಮತ್ತು ನಂತರದ ಲಾಭ-ಹಾನಿ ಕಂಡು ಹಿಡಿಯಿರಿ.

7. ಶಂಕರ ಕಂಪನಿ ನಿಯಮಿತವು ಆಂತರಿಕ ಪುನರ್-ರಚನೆಗೆ ನಿರ್ಧರಿಸಿದ್ದು, ನ್ಯಾಯಾಲಯವು ಅನುಮೋದನೆ ನೀಡಿದೆ. ಈ ಕೆಳಗಿನಂತೆ ಯೋಜನೆಗಳಿವೆ.

a) 1,00,000 ಸಾಮಾನ್ಯ ಶೇರುಗಳು ಪ್ರತಿ ಶೇರಿಗೆ ರೂ. 10 ರಂತೆ ಸಂದಾಯವಾಗಿದ್ದು, ಪ್ರತಿ ಶೇರಿಗೆ ರೂ. 7 ರಂತೆ ಇಳಿಸಲಾಯಿತು.

b) 2,00,000 ಪ್ರಾಶಸ್ತ್ಯದ ಶೇರುಗಳು ಪ್ರತಿ ಶೇರಿಗೆ ರೂ. 10 ರಂತೆ ಸಂದಾಯವಾಗಿದ್ದು, ಪ್ರತಿ ಶೇರನ್ನು ರೂ. 2 ರಂತೆ ಇಳಿಸಲಾಯಿತು.

c) ಶೇರು ಬಂಡವಾಳ ಕಡಿತವಾದ ಮೊತ್ತವನ್ನು ಕ್ರೋಢೀಕೃತ ಹಾನಿ ಶಿಲ್ಕು ರೂ. 2,60,000 ಮತ್ತು ಆರಂಭಿಕ ವೆಚ್ಚ ರೂ. 1,50,000; ಸ್ವಾಮ್ಯ ಸನ್ನದು ತೆಗೆಯಲು ರೂ. 1,75,000 ಕೀರ್ತಿಮೌಲ್ಯ ರೂ. 2,00,000; ಶೇರುಗಳು ಮೇಲಿನ ವಿತರಣಾ ಸೋಡಿ ರೂ. 1,35,000.

ಈ ಮೇಲಿನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ರೋಜು ಧಾಖಲೆಗಳನ್ನು ಬರೆಯಿರಿ.

Scanned by CamScanner

**ವಿಭಾಗ ಕ** (ಅಂಕಗಳು : 3 × 15 = 45)

**ಹದಿಮೂರನೇ ಪ್ರಶ್ನೆ ಕಡ್ಡಾಯವಾಗಿದ್ದು,**
*ಉಳಿದವುಗಳಲ್ಲಿ ಬೇಕಾದ* **ಎರಡಕ್ಕೆ** *ಉತ್ತರಿಸಿರಿ.*

8. ಸುರೇಶ ಕಂ. ನಿ. ರೂ. 100 ಮುಖಬೆಲೆಯ 25,000 ಶೇರುಗಳನ್ನು ರೂ. 10 ರ ಕಡತದ (ಸೋಡಿ) ಬೆಲೆಯಲ್ಲಿ ಸಾರ್ವಜನಿಕರಿಗೆ ಆಹ್ವಾನ ನೀಡಿದೆ. ಶೇರು ಹಣವನ್ನು ಈ ಕೆಳಗಿನಂತೆ ಸಂದಾಯ ಮಾಡಬೇಕು.

    ಅರ್ಜಿಯೊಂದಿಗೆ ರೂ. 20

    ವಿತರಣೆಯೊಂದಿಗೆ ರೂ. 30

    ಮೊದಲ ಮತ್ತು ಅಂತಿಮ ಕರೆಯೊಂದಿಗೆ ರೂ. 40

    ಎಲ್ಲಾ ಶೇರುಗಳನ್ನು ಸಾರ್ವಜನಿಕರು ತೆಗೆದುಕೊಂಡು ಹಣ ಪಾವತಿ ಮಾಡಿದರು. ಈ ವ್ಯವಹಾರವನ್ನು ಕಂಪನಿಯ ರೋಜು ಪುಸ್ತಕದಲ್ಲಿ ಬರೆಯಿರಿ, ವಿವಿಧ ಖಾತೆಗಳನ್ನು ತೆಗೆಯಿರಿ. ಮತ್ತು ಆಢಾವೆ ಪತ್ರಿಕೆಯನ್ನು ತಯಾರಿಸಿರಿ.

9. ಮಂಜುಳಾ ಕಂಪನಿ ಲಿ., 180.000 ಸಾಮಾನ್ಯ ಶೇರುಗಲನ್ನು ಸಾರ್ವಜನಿಕರಿಗೆ ರೂ. 10 ಮುಖಬೆಲೆಯ ಶೇರುಗಳನ್ನು ವಿತರಿಸಲು ಆಹ್ವಾನಿಸಿದೆ. ಒಟ್ಟು ಎಲ್ಲಾ ಶೇರುಗಳ ಜವಾಬ್ದಾರಿಯನ್ನು ಈ ಕೆಳಗಿನಂತೆ ತೆಗೆದುಕೊಳ್ಳಲಾಗಿದೆ.

    ಆಕಾಶ – 90,000 ಶೇರುಗಳು (ನಿಶ್ಚಿತ (Firm) ಜವಾಬ್ದಾರಿ 18,000 ಶೇರುಗಳು)

    ಬಾಲು – 54,000 ಶೇರುಗಳು (ನಿಶ್ಚಿತ ಜವಾಬ್ದಾರಿ 9,000 ಶೇರುಗಳು)

    ಚೇತನ – 36,000 ಶೇರುಗಳು (ನಿಶ್ಚಿತ ಜವಾಬ್ದಾರಿ 9,000 ಶೇರುಗಳು)

    1,62,000 ಶೇರುಗಳಿಗೆ ಅರ್ಜಿಯನ್ನು ಸ್ವೀಕರಿಸಲಾಗಿದೆ. ಅವುಗಳಲ್ಲಿ ನಿಶ್ಚಿತ ಜವಾಬ್ದಾರಿ ಶೇರುಗಳನ್ನು ಒಳಗೊಂಡಂತೆ, ಮುದ್ರಿತ ಅರ್ಜಿಗಳು ಈ ಕೆಳಗಿನಂತಿವೆ :

    ಆಕಾಶ – 63,000 ಶೇರುಗಳು

    ಬಾಲು – 25,200 ಶೇರುಗಳು

    ಚೇತನ – 28,800 ಶೇರುಗಳು

    ಶೇರು ಗುತ್ತಿಗೆದಾರರ ವೈಯಕ್ತಿಕ ಜವಾಬ್ದಾರಿಯನ್ನು ಕಂಡು ಹಿಡಿಯಿರಿ.

10. ಅಭಿಷೇಕ ಕಂ.ನಿ. ರೂಪಾಯಿ 100 ಮುಖಬೆಲೆಯ 20,000 ಸಾಲಪತ್ರಗಳನ್ನು ಕೊಳ್ಳಲು ಸಾರ್ವಜನಿಕರಿಗೆ ಆಹ್ವಾನಿಸಿತು. ಸಾಲಪತ್ರದ ಹಣವನ್ನು ಕೆಳಗಿನಂತೆ ಪಾವತಿ ಮಾಡಬೇಕು.

    ಅರ್ಜಿಯೊಂದಿಗೆ – ರೂ. 10
    ವಿತರಣೆಯೊಂದಿಗೆ – ರೂ. 20
    ಮೊದಲನೇಯ ಕರೆ – ರೂ. 15
    ಎರಡನೇಯ ಕರೆ – ರೂ. 25
    ತೃತೀಯ ಮತ್ತು ಅಂತಿಮ ಕರೆ – ರೂ. 30

    ಎಲ್ಲಾ ಸಾಲಪತ್ರಗಳನ್ನು ಸಾರ್ವಜನಿಕರು ತೆಗೆಧುಕೊಂಡು ಹಣ ಪಾವತಿ ಮಾಡಿದರು. ಈ ವ್ಯವಹಾರವನ್ನು ಕಂಪನಿಯ ರೋಜು ಪುಸ್ತಕದಲ್ಲಿ ಬರೆಯಿರಿ ಮತ್ತು ವಿವಿಧ ಖಾತೆಗಳನ್ನು ತೆರೆಯಿರಿ.

[P.T.O.

Scanned by CamScanner

11. ದಿನಾಂಕ 31-03-2019 ನಂದು ಸುರೇಶ ಕಂ.ನಿ., ಇವರು ನೀಡಿರುವ ತಾಳೆ ಪಟ್ಟಿ (Trial Balance) ಈ ಕೆಳಗಿನಂತಿದೆ. ನಿರ್ದಿಷ್ಟ (Vertical) ನಮೂನೆಯಲ್ಲಿ ಆಢಾವೆ ಪತ್ರಿಕೆಯನ್ನು ತಯಾರಿಸಿರಿ ಮತ್ತು ಸಂಬಂಧಿಸಿದ ಟಿಪ್ಪಣಿ ಬರೆಯಿರಿ :

| ವಿವರ | Debit (Rs.) | Credit (Rs.) |
|---|---|---|
| a) ಶೇರು ಬಂಡವಾಳ<br>13,000 ಸಾಮಾನ್ಯ ಶೇರುಗಳು ರೂ. 10 ರಂತೆ | — | 1,30,000 |
| b) ಸೆಕ್ಯುರಿಟಿ ಪ್ರೀಮಿಯಮ್ | — | 50,000 |
| c) ಸಾಮಾನ್ಯ ನಿಧಿ | — | 1,12,500 |
| d) ಈ ವರ್ಷದ ಹಾನಿ (ನಷ್ಟ) | 30,000 | — |
| e) ಸಾಲಪತ್ರಗಳು ಮತ್ತು ಬಾಂಡ್ | — | 1,00,000 |
| f) ಇತರೇ ದೀರ್ಘ ಅವಧಿಯ ಸಾಲಗಳು | — | 20,000 |
| g) ಅಲ್ಪಾವಧಿಯ ಸಾಲಗಳು | — | 30,000 |
| h) ವ್ಯಾಪಾರಿ ಕೊಡತಕ್ಕವುಗಳು (ಅಲ್ಪಾವಧಿ) | — | 1,04,500 |
| i) ಇತರೇ ಚಾಲ್ತಿ ಹೊಣೆಗಾರಿಕೆಗಳು | — | 17,000 |
| j) ಆದಾಯ ತೆರಿಗೆಗಳಿಗೆ ಅವಕಾಶ | — | 70,000 |
| k) ಕಟ್ಟಡಗಳು (ಸವಕಳಿ ನಂತರ ರೂ. 36,000) | 2,45,000 | — |
| l) ಬಂಡವಾಳ ಕಾರ್ಯ ಪ್ರಗತಿಯಲ್ಲಿದೆ (ನಿರ್ಮಾಣ ವೆಚ್ಚ) | 10,000 | — |
| m) ಹೂಡಿಕೆಗಳು (ಚಾಲ್ತಿ ರಹಿತ) | 42,520 | — |
| n) ಅಂತಿಮ ಸರಕು | 1,20,000 | — |
| o) ಬಿಡಿ ಭಾಗಗಳು (Loose Tools) | 5,800 | — |
| p) ವ್ಯಾಪಾರಿ ಬರತಕ್ಕ ಮೊತ್ತಗಳು (ಅಲ್ಪಾವಧಿ) | 1,20,480 | — |
| q) ನಗದು ಬ್ಯಾಂಕಿನಲ್ಲಿ | 60,200 | — |
| | 6,34,000 | 6,34,000 |

ಇತರೇ ಮಾಹಿತಿಗಳು :

a) ಅಧಿಕೃತ ಬಂಡವಾಳವು 24,000 ಸಾಮಾನ್ಯ ಶೇರುಗಳು ಮುಖ ಬೆಲೆ ರೂ. 10 ರಂತೆ.

b) ಇತರೇ ಚಾಲ್ತಿ ಹೊಣೆಗಾರಿಕೆಯು ಮುಂಗಡ ಆದಾಯವನ್ನು ಒಳಗೊಂಡಿರುತ್ತದೆ.

Scanned by CamScanner

12. ಶಂಕರ ನಿಯಮಿತವು 1-7-2018 ರಂದು ನೊಂದಣಿಯಾಗಿದೆ. ಅದು ಶಿವಾ ನಿಯಮಿತವನ್ನು ದಿನಾಂಕ 1-4-2018 ರಂದು ಖರೀದಿಸಿದೆ. ದಿನಾಂಕ 31-03-2019 ಕ್ಕೆ ಕೊನೆಗೊಳ್ಳುವ ವರ್ಷದ ಮಾಹಿತಿ ಈ ಕೆಳಗಿನಂತಿದೆ :

| ವಿವರ | ರೂಪಾಯಿ |
|---|---|
| ವ್ಯಾಪಾರಿ ಲಾಭಗಳು (Gross Profit) | 2,80,000 |
| ಖರ್ಚುಗಳು : | |
| ವೇತನಗಳು ಮತ್ತು ಭತ್ಯೆಗಳು | 1,44,000 |
| ಕಛೇರಿ ವೆಚ್ಚಗಳು | 48,000 |
| ಮುದ್ರಣ ಮತ್ತು ಸಾಮಗ್ರಿಗಳು | 8,000 |
| ಬಾಡಿಗೆ ಮತ್ತು ಕರಗಳು | 7,200 |
| ವಿಕ್ರಯದ ಮೇಲೆ ದಲಾಲಿ | 32,000 |
| ಲೆಕ್ಕ ತಪಾಸಣೆ ಶುಲ್ಕ | 4,000 |
| ಉದಾರ ಸ್ಯಾಂಪಲ್ (Free Sample) | 8,000 |
| ಸಾಲಪತ್ರಗಳ ಬಡ್ಡಿ | 12,000 |
| ಸವಕಳಿ (Depreciation) | 16,000 |
| ಕರಡು ಸಾಲಗಳು | 3,200 |
| ನಿರ್ದೇಶಕರ ಶುಲ್ಕ | 4,000 |
| ಆರಂಭಿಕ ವೆಚ್ಚ (Formation expenses) | 4,000 |
| ಸಾಮಾನ್ಯ ವೆಚ್ಚಗಳು | 1,600 |
| | 2,92,000 |
| ನಿವ್ವಳ ಹಾನಿ / Net loss (2,92,000-2,80,000) | 12,000 |

ಹೆಚ್ಚಿನ ಮಾಹಿತಿ :

a) 1-7-2018 ನ ವರೆಗೆ ವಿಕ್ರಿ (Sales) ರೂ. 3,20,000 ಹಾಗೂ ನಂತರದ್ದು ರೂಪಾಯಿ 4,80,000.

b) ಪ್ರತಿ ತಿಂಗಳು ರೂ. 400/- ಬಾಡಿಗೆ ಕೊಟ್ಟಿದೆ.

c) 30-6-2018 ನ ವರೆಗಿನ ಕರಡು ಸಾಲಗಳು ರೂ. 800/-.

ನೊಂದಣಿ ಪೂರ್ವ ಮತ್ತು ನಂತರದ ಲಾಭ/ನಷ್ಟವನ್ನು ಕ್ರಮಬದ್ಧವಾಗಿ ಕಂಡು ಹಿಡಿಯಿರಿ.



Scanned by CamScanner

13. ಪ್ರಕರಣ ಅಧ್ಯಯನ (ಕಡ್ಡಾಯವಾಗಿದೆ)

ಜಿ ಮತ್ತು ಕಂಪನಿಯ ಆಢಾವೆ ಪತ್ರಿಕೆ (ಆಸ್ತಿ–ಹೊಣೆಗಾರಿಕೆಗಳ ಪಟ್ಟಿ)ಯು 31-3-2019 ಕ್ಕೆ ಈ ಕೆಳಗಿನಂತಿದೆ.

| ವಿವರಗಳು | ಟಿಪ್ಪಣಿ | ರೂ. |
|---|---|---|
| I. ಈಕ್ವಿಟಿ ಮತ್ತು ಹೊಣೆಗಾರಿಕೆ : | | |
| 1. ಶೇರುದಾರರ ನಿಧಿ : | | |
| a) ಶೇರು ಬಂಡವಾಳ | 1 | 20,00,000 |
| b) ಮೀಸಲು ಮತ್ತು ಮಿಗತೆ | 2 | (–) 3,00,000 |
| 2. ಚಾಲ್ತಿ ಹೊಣೆಗಾರಿಕೆಗಳು : | | |
| a) ವ್ಯಾಪಾರ ಕೊಡತಕ್ಕವುಗಳು | 3 | 15,50,000 |
| ಒಟ್ಟು | | 32,50,000 |
| II. ಆಸ್ತಿಗಳು : | | |
| 1. ಚಾಲ್ತಿರಹಿತ ಆಸ್ತಿಗಳು | | |
| a) ಗೋಚರ ಆಸ್ತಿಗಳು | 4 | 20,00,000 |
| b) ಅಗೋಚರ ಸ್ಥಿರಾಸ್ತಿಗಳು | 5 | 4,50,000 |
| 2. ಚಾಲ್ತಿ ಆಸ್ತಿಗಳು : | | |
| a) ಸರಕು ಸಂಗ್ರಹಣೆ | 6 | 7,80,000 |
| b) ನಗದು ಮತ್ತು ನಗದು ಸಮಾನ | 7 | 20,000 |
| ಒಟ್ಟು | | 32,50,000 |

ಟಿಪ್ಪಣಿಗಳು :

1. ಶೇರುಬಂಡವಾಳ :

| | |
|---|---|
| 2,00,000 ಸಾಮಾನ್ಯ ಶೇರುಗಳು ರೂ. 10 ಪ್ರತಿ ಶೇರಿಗೆ | 20,00,000 |

2. ಮೀಸಲು ಮತ್ತು ಮಿಗತೆ :

| | |
|---|---|
| ಲಾಭ–ಹಾನಿ ಖಾತೆ (ಹಾನಿ) | (–) 2,00,000 |
| ಪೂರ್ವ–ಭಾವಿ ವೆಚ್ಚಗಳು | (–) 1,00,000 |
| | 3,00,000 |

3. ವ್ಯಾಪಾರ ಕೊಡತಕ್ಕವುಗಳು :

| | |
|---|---|
| ಸಾಮಾನ್ಯ ಸಾಲಿಗರು | 14,50,000 |
| ಕೊಡತಕ್ಕ ಹುಂಡಿಗಳು | 1,00,000 |
| | 15,50,000 |

4. ಗೋಚರ ಸ್ಥಿರಾಸ್ತಿಗಳು: ಯಂತ್ರೋಪಕರಣ 20,00,000

Scanned by CamScanner

| | |
|---|---|
| 5. ಅಗೋಚರ ಸ್ಥಿರಾಸ್ತಿಗಳು : | |
| ಸುನಾಮು | 4,00,000 |
| ಸ್ವಾಮ್ಯಸನ್ನದು | 50,000 |
| | 4,50,000 |
| 6. ಸರಕು – ಸಂಗ್ರಹಣೆ : ಶಿಲ್ಕು | 7,80,000 |
| 7. ಮಗದು – ನಗದು ಸಮಾನ (ನಗದು) | 20,000 |

ಶೇರು ಬಂಡವಾಳ ಇಳಿಕೆಗೆ ಯೋಗ್ಯವಾದ ಯೋಜನೆಯನ್ನು ತಯಾರಿಸಿ ಅದಕ್ಕೆ ಸಹಾಯಕವಾಗಿ ಈ ಕೆಳಗಿನ ಅಂಶಗಳನ್ನು ಗಮನಿಸಿರಿ :

a) ಲಾಭ–ಹಾನಿ ಖಾತೆಯಲ್ಲಿನ ಹಾನಿಯನ್ನು ಮತ್ತು ಕೀರ್ತಿ ಮೌಲ್ಯವನ್ನು ಸಂಪೂರ್ಣವಾಗಿ ತೆಗೆದುಹಾಕಿರಿ.

b) ಯಂತ್ರೋಪಕರಣದ ಮೇಲೆ 10% ಸವಕಳಿ ತೆಗೆಯಿರಿ.

c) ಸರಕು–ಸಂಗ್ರಹಗಳ ಮೌಲ್ಯವನ್ನು ರೂ. 7,30,000 ಕ್ಕೆ ಇಳಿಸಿರಿ.

ಮೇಲಿನ ಯೋಜನೆಯನ್ನು ಅನುಷ್ಠಣಗೊಳಿಸಲು ರೋಜ ದಾಖಲೆಗಳನ್ನು ಬರೆಯಿರಿ ಮತ್ತು ಜಿ. ಕಂಪನಿಯ ಆಢಾವೆ ಪತ್ರಿಕೆಯನ್ನು ಬರೆಯಿರಿ.

Scanned by CamScanner